ಆ. ಭೂ ಸ್ವಾಧೀನ ಕ್ರಮಗಳು ಇನ್ನೂ ಸಂಪೂರ್ಣವಾಗಿಲ್ಲದಿರುವುದರಿಂದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿಲ್ಲ.

ಇ. ಉದ್ದೇಶಿತ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಒಟ್ಟು 23 ಎಕರೆ ಜಮೀನನ್ನು ಮಂಜೂರು ಮಾಡಲು ಕೋರಿ 3 ಅರ್ಜಿಗಳು ಬಂದಿರುತ್ತವೆ.

ತುಮಕೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಜಾರಿಗೆತರುವ ಬಗ್ಗೆ

2211: ಶ್ರೀ ಎಸ್.ಶಫೀ ಅಹಮ್ಮದ್ (ತುಮಕೂರು):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1.ತುಮಕೂರು ಪಟ್ಟಣ ಜನಸಂಖ್ಯೆಯ 2.5 ಲಕ್ಷ ಮೀರಿರುವುದರಿಂದ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಪ್ರಸ್ತಾವನೆ ಇದೆಯೇ;

2. ನಗರಸಭೆ ಸರಹದ್ದಿನಲ್ಲಿ ಅನಧಿಕೃತವಾಗಿರುವ ಕಟ್ಟಡಗಳನ್ನು ಖಾಯಂಗೊಳಿಸುವ ಬಗ್ಗೆ ನಿರ್ದೇಶನ ನೀಡಲಾಗಿದೆಯೇ ? ಹಾಗಿದ್ದಲ್ಲಿ ಇದು. ಯಾವಾಗ ಜಾರಿಗೆ ಬರುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಹೌದು. ತುಮಕೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಗೆ ಭೂಸಮೀಕ್ಷೆಯನ್ನು ನಡೆಸಲು ರೂ.76.000–00ಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ತುಮಕೂರು ನಗರಸಭೆಗೆ ದಿನಾಂಕ 12–1–1993ರಂದು ಮಂಡಳಿಗೆ ಹಣ ಠೇವಣಿ ಮಾಡುವಂತೆ ಕೋರಲಾಗಿದೆ.

2.ಕರ್ನಾಟಕ ನಗರ ಪ್ರದೇಶ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ಕಾಯ್ದೆ 1991ನ್ನು ದಿನಾಂಕ 1–8–92ರಿಂದ ಜಾರಿಗೆ ಬರುವಂತೆ ಪ್ರಕಟಿಸಲಾಗಿದೆ. ಮತ್ತು ಸದರಿ ಕಾಯ್ದೆಯನ್ವಯ ಕರಡು ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ. ಹಾಗೂ ಆಕ್ಷೇಪಣೆಗಳನ್ನು ಕರೆಯಲಾಗಿದ್ದು ಸದರಿ ನಿಯಮಾವಳಿಗಳನ್ನು ಅಂತಿಮವಾಗಿ ಪ್ರಕಟಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಸದರಿ ಕಾಯ್ದೆಯನ್ವಯ ಅಂತಿಮ ನಿಯಮಾವಳಿಗಳನ್ನು ಪ್ರಕಟಿಸಿದ ಮೇಲೆ ಕಾಯ್ದೆಯನ್ನು ಪೂರ್ಣವಾಗಿ ಜಾರಿಗೆ ತರಲಾಗುವುದು.

ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿರುವ ನಿವೇಶನಗಳ ಬಗ್ಗೆ

2028: ಶ್ರೀ ಬಿ. ಸ್ವಾಮಿರೆಡ್ಡಿ (ಹೊಸನಗರ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ 1991–92ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನರಹಿತರಿಗೆ ಎಷ್ಟು ನಿವೇಶನವನ್ನು ನೀಡಲಾಗಿದೆ ? (ವಿವರ ನೀಡುವುದು);

ಆ.–ಫಲಾನುಭವಿಗಳನ್ನು ಯಾವ ಆಧಾರದ ಮೇರೆಗೆ ಗುರುತಿಸಲಾಗಿದೆ;

ಇ. ಫಲಾನುಭವಿಗಳನ್ನು ಗುರುತಿಸುವಾಗ ಭಾರಿ ಪ್ರಮಾಣದಲ್ಲಿ ಹಣದ ಅವ್ಯವಹಾರ ಕಂದಾಯ ಇಲಾಖೆಯ ಅಧಿಕಾರಿಗಳ ವತಿಯಿಂದ ನಡೆದಿರುವುದರ ಬಗ್ಗೆ ಸದರಿ ಗ್ರಾಮಸ್ಥರು ನೀಡಿದ

ದೂರಿನನ್ವಯ ತಾಲ್ಲೂಕು ಪಂಚಾಯ್ತಿ ಸಮಿತಿಯಿಂದ ವಿಚಾರಣೆ ನಡೆಸಲಾಗಿದೆಯೇ; ಹಾಗಿದ್ದರೆ ವಿಚಾರಣೆಯ ವಿವರನೀಡುವುದು ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಒಟ್ಟು 40 ನಿವೇಶನಗಳನ್ನು ಹಂಚಲಾಗಿದೆ. ವಿವರ ಕೆಳಕಂಡಂತೆ ಇದೆ.

1. ಎ.ಕೆ. 1
2. ಈಡಿಗಾಸ್ 32
3. ಒಕ್ಕಲಿಗ 07

ಆ. ಸರ್ಕಾರಿ ಮಾರ್ಗದರ್ಶನದ ಸುತ್ತೋಲೆ ಸಂ.ಆರ್.ಡಿ.ಪಿ. 67 ಹೆಚ್ಎಲ್ಎ 91 ದಿನಾಂಕ:25–4–91 ಹಾಗೂ 2–11–91 ರ ಪ್ರಕಾರ.

ಇ. ಸದರಿ ವಿಷಯದ ಬಗ್ಗೆ ಯಾವ ತರದ ದೂರಿನ ಅರ್ಜಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದಿಡಲಾಗಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ದಿನಾಂಕ 19-3–1993ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 176, 178, 179, 1520, 248, 1532, 1630, 1166, 2029, 15 40ಎ ಮತ್ತು 1366, ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸದ ಬಗ್ಗೆ

54: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಲಾಭದಲ್ಲಿ ನಡೆಯುತ್ತಿದೆಯೇ;

ಆ. ಈ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಮತ್ತು ಆ. ಮೈಸೂರಿನಲ್ಲಿ ಕೆಳಕಂಡ 3 ಕಾಫಿ ಕ್ಯೂರಿಂಗ್ ವರ್ಕ್ಸ್ ಘಟಕಗಳು ಹಾಲಿ ಕೆಲಸ ನಿರ್ವಹಿಸುತ್ತಿವೆ. ಅವುಗಳಲ್ಲಿರುವ ಕೆಲಸಗಾರರ ಸಂಖ್ಯೆ ಹಾಗೂ ಅವುಗಳ ಲಾಭ:ನಷ್ಟಗಳ ಮಾಹಿತಿಯನ್ನು ಪ್ರತಿ ಘಟಕದ ಹೆಸರಿನ ಮುಂದೆ ತೋರಿಸಲಾಗಿದೆ:–

ಘಟಕದ ಹೆಸರು	ಕೆಲಸಗಾರರ ಸಂಖ್ಯೆ		ಘಟಕದ ಲಾಭ:ನಷ್ಟ
	ಸಿಬ್ಬಂದಿ ವರ್ಗ	ಕೆಲಸಗಾರರು	(1991-92ನೇ ಸಾಲಿನದು)
1) ಮೆ:ಮೈಸೂರು ಕಾಫಿ ಪ್ರೋಸೆಸಿಂಗ್ ಕೋ ಆಪರೇಟಿವ್ ಸೊಸೈಟಿ	62	152	ನಷ್ಟ (ರೂ. 36.547–37)